

ಅರಿಯಲು ಮೂರು ಪ್ರಮಾಣಗಳಿವೆ: ಪ್ರತ್ಯಕ್ಷ, ಶಬ್ದ ಮತ್ತು ಅನುಮಾನ. ಕಣ್ಣಾರೆ ಕಂಡುದು ಪ್ರತ್ಯಕ್ಷವಾದರೆ, ಬಲ್ಲವರನ್ನು, 'ಕಂಡವರನ್ನು' ಕೇಳಿ ನಂಬುವುದು ಶಬ್ದ ಪ್ರಾಮಾಣ್ಯ. ಅನುಮಾನವು ಬುದ್ಧಿಯ ಕಾರ್ಯ. ತರ್ಕ, ಊಹೆಗಳಿಂದ ಬುದ್ಧಿಯು ಸತ್ಯಾಸತ್ಯತೆಯನ್ನು ಅರಿಯಲೆತ್ನಿಸುತ್ತದೆ.

ಮೂಲತಃ ಪಶುವೇ ಆಗಿರುವ ಮನುಷ್ಯನು 'ಮನುಷ್ಯ'ನಾದದ್ದೇ ಬುದ್ಧಿಶಕ್ತಿಯ ಉದಯದಿಂದ. ವಿಕಾರ ಪಶು ಪ್ರವೃತ್ತಿ, ಅದು ಮನುಷ್ಯನ ಮೂಲ ಪ್ರಕೃತಿ. ವಿಚಾರದಿಂದ ಅವನು ಸಂಸ್ಕೃತಿಯೆಡೆ ಚಲಿಸುತ್ತಿದ್ದಾನೆ. (ಇದು ಇವತ್ತಿಗೂ ಇನ್ನೂ ಸತ್ಯವೇ, ಈ ಮಾರ್ಗ ಕ್ರಮಣ ಮುಗಿದಿಲ್ಲ, ಮುಗಿಯಲಿಕ್ಕೂ ಇಲ್ಲ. ಈ ಪ್ರಯಾಣ ನೇರವಾಗಿಯೂ ಇಲ್ಲ.) ಶುದ್ಧ ವೈಚಾರಿಕ ಬುದ್ಧಿಯ ಕೃಷಿಯಿಂದಲೇ ಮಾನವ್ಯದ ಸಾರ್ಥಕ್ಯ. ಬುದ್ಧಿಯು ಮನೋವಿಕಾಸದ ಕ್ರಮದಲ್ಲಿ 'ಮೊನ್ನೆಯ ಕೂಸು'. ಪ್ರವೃತ್ತಿಗಳ ಒಳಪ್ರೇರಣೆಗಳ ಬಾಳು ಹೆಚ್ಚು ಸರಳ. ಆದರೆ ಮನುಷ್ಯ ಬುದ್ಧಿಯ 'ಉರಿದಾರಿ'ಯಲ್ಲಿ ಮುನ್ನಡೆಯಲು ನಿಶ್ಚಯಿಸಿಕೊಂಡ. ಭಯ, ಪೂರ್ವಗ್ರಹ, ಅಜ್ಞಾನ – ಅರೆಬರೆ ಜ್ಞಾನ, ಸ್ವಾರ್ಥ, ಆತ್ಮವಂಚಕ ತರ್ಕ, ಮನೋದೌರ್ಬಲ್ಯ, ಭಾವೋದ್ರೇಕ ಮುಂತಾದವು ಬುದ್ಧಿಯ ಶತ್ರುಗಳು. ನಾವು ನಂಬಿದ್ದೆಲ್ಲ ನಿಜವಿರಬೇಕೆಂದಿಲ್ಲ, ನಾವು ಮೆಚ್ಚಿದ್ದೆಲ್ಲ ಒಳ್ಳೆಯದಿರಬೇಕೆಂದಿಲ್ಲ ಮತ್ತು ಎಲ್ಲ ಪ್ರಶ್ನೆಗಳಿಗೂ ಕೊನೆಯ ಉತ್ತರ ಸಿಕ್ಕಿದೆಯೆಂದಿಲ್ಲ – ಇವು ಬುದ್ಧಿಯ ಶುದ್ಧ ಮಾರ್ಗದಲ್ಲಿ ಸಾಗುವವನ ಮೂರು ಮೂಲ ಸೂತ್ರಗಳು.

ಬುದ್ಧಿಯ ಕುರಿತ ನನ್ನ ಎಲ್ಲ ಮೂಲ ಸಂದೇಹಗಳಿಗೂ ಗೌರೀಶರ ಪುಸ್ತಕದಲ್ಲಿ ಉತ್ತರ ಸಿಕ್ಕೆತೆನ್ನಬೇಕು. ಬುದ್ಧಿಯನ್ನು ನೆಚ್ಚಿ ಬಾಳುವವರ ಕುರಿತು ಯಾಕೆ ಅನೇಕರು ಸಿಟ್ಟಿಗೇಳುತ್ತಾರೆ ಎಂಬುದೂ ಅರ್ಥವಾಗತೊಡಗಿತು. ಅಂಥವರ ಬಗೆಗೆ ಅನುಕಂಪ ಮೂಡಿತು. ಆದರೆ ಇಷ್ಟಕ್ಕೇ ಶೋಧನೆ ನಿಲ್ಲಿಸಿಬಿಡುವುದೆ? ಮುಂದುವರಿದೆ...

''ಓದು ಒಕ್ಕಾಲು ಬುದ್ಧಿ ಮುಕ್ಕಾಲು'' ಎಂಬ ಗಾದೆಮಾತು ಚಿಕ್ಕಂದಿನಿಂದ ನಾವೆಲ್ಲ ಕೇಳಿಸಿಕೊಂಡಿದ್ದೆ. ನನಗಂತೂ ಆಗ ಅದು ಸರಿಯಾಗಿ ಅರ್ಥವಾಗಿರಲೇ ಇಲ್ಲ. ಮತ್ತೆ ಮತ್ತೆ ಹಾಗೆಂದರೇನೆಂದು ಕೇಳಿ ''ನಿನ್ನಂಥವರ ಬಗೆಗೇ ಹೇಳಿದ್ದು ಅದು'' ಎಂದು ಬೈಸಿಕೊಂಡು ಸುಮ್ಮನಾಗಿದ್ದೆ. ಬರಿಯ ಓದು ಪ್ರಯೋಜನದ್ದಲ್ಲ ಎಂಬುದು ಎಲ್ಲರಿಗೂ ಗೊತ್ತು. ಒಂದು ನಾಡಿನ ಅಕ್ಷರಸ್ಥರ ಸಂಖ್ಯೆ ಆ ನಾಡಿನ ಬುದ್ಧಿವಂತರ ಸಂಖ್ಯೆಯಲ್ಲ! ಸರಿ, ಈಗ ಏನು ಮಾಡೋಣ? ಈ ಗಾದೆ ಹಾದಿ ತೋರುತ್ತದೆ, ಓದು ಮುಂದಿನ ಹಂತದಲ್ಲಿ ಹೇಗೆ ಪೂರ್ಣಗೊಳ್ಳಲು ಸಾಧ್ಯ ಎಂಬುದನ್ನು ಅದು ಸೂಚಿಸುತ್ತದೆ. ಕಲಿತಿದ್ದನ್ನು ಬುದ್ಧಿಯು ಶೋಧಿಸಿ, ಮನನ ಮಾಡಿ, ಅನುಭವ ಪಡೆದು ವಿದ್ಯೆಯನ್ನು ಸ್ವಾರ್ಜಿತ ಮಾಡಿಕೊಳ್ಳಬೇಕು. ಇಲ್ಲವಾದರೆ ಏನಾಗುತ್ತದೆ? ಇನ್ನೊಂದು ಗಾದೆ: ಓದಿ ಓದಿ ಮರುಳಾದ ಕೂಚು ಭಟ್ಟ! ಆದ್ದರಿಂದಲೇ ವಿದ್ಯೆ ಬೇರೆ, ಬುದ್ಧಿ ಬೇರೆ ಎಂಬ ಮಾತೂ ಹುಟ್ಟಿಕೊಂಡಿತು. 'ಚಿಕ್ಕಂದಿನ ವಿದ್ಯೆ ಪೊರೆಗು ಚೂಡಾರತ್ನಾ' ಎಂದು ಪ್ರಾಥಮಿಕ ಶಾಲೆಯಲ್ಲಿ ರಾಗವಾಗಿ ಉರು ಹಚ್ಚುತ್ತಿದ್ದುದು ನೆನಪಾಗುತ್ತದೆ. ''ವಿದ್ಯೆ ಕಲಿಸದ ತಂದೆ, ಬುದ್ಧಿ ಹೇಳದ ಗುರುವು'' ಶುದ್ಧ ವೈರಿಗಳೆಂದು ಸರ್ವಜ್ಞ ಹೇಳಿದ. ವಿದ್ಯೆ ಬುದ್ಧಿಯಾಗಿ ಮಾಗಬೇಕೆಂಬುದು ನಿಜ. ಬುದ್ಧಿಗೆ ವಿದ್ಯೆಯ ಸಂಸ್ಕಾರ ಅವಶ್ಯ ಎಂಬುದೂ ಅಷ್ಟೇ ನಿಜ.

ಈ ಪ್ರಬಂಧದ ಶುರುವಿನಲ್ಲಿ ಹೇಳಿದ ಪ್ರಕರಣದಲ್ಲಿ ಬುದ್ಧಿಜೀವಿ ಪದದ (ಪಟ್ಟದ) ಕುರಿತು ಗೆಳೆಯರು ನನ್ನಲ್ಲಿ ಚಿಂತನೆಯ ಕಿಡಿ ಕೆದರಿಬಿಟ್ಟರಷ್ಟೇ. ಇದೇ ಹೊತ್ತಿಗೆ ಸದಾ ಯೋಗಾಭ್ಯಾಸದಲ್ಲಿ ತೊಡಗಿರುವ ಹಳೆಯ ಗೆಳೆಯರು ಸಿಕ್ಕರು. ಅವರು ಬೆಳಗ್ಗೆ ತುಂಬಾ ಬೇಗ ಎದ್ದು ಒಂದು ದೇವಾಲಯದ ಪ್ರಾಂಗಣದಲ್ಲಿ ಯೋಗಾಭ್ಯಾಸ ಮಾಡುತ್ತಾರೆ ಎಂಬುದು ಗೊತ್ತಿತ್ತು. ನಾನು ನಿಧಾನವಾಗಿ ಎಂಟು ಗಂಟೆಗೆ ವಾಕಿಂಗಿಗೆ ಹೋಗುವವನು. ಆದುದರಿಂದ ನಮ್ಮ ಭೇಟಿ ಆಗುತ್ತಿರಲಿಲ್ಲ. ಅಂದು ಬೆಳಗ್ಗೆ